## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

## ಸಿ. ಸಿ. ನಂ.1190/2024.

| | | | |
|---|---|---|---|
| ಸಾಕ್ಷಿಧಾರರ ಹೆಸರು | : ಕುಮಾರ ಅರಳೇಶ್ವರ | ಪಿಡಬ್ಲ್ಯೂ | 02 |
| ತಂದೆ:ಗಂಡನ ಹೆಸರು | : ನಿಂಗಪ್ಪ | ಸಿಡಬ್ಲ್ಯೂ | 03 |
| ವಯಸ್ಸು | : 27 ವರ್ಷ | | |
| ಉದ್ಯೋಗ | : ವ್ಯವಸಾಯ | | |
| ವಾಸಸ್ಥಳ | : ನಿಟಗಿನಕೊಪ್ಪ ತಾ: ಹಾನಗಲ್ | | |

ದಿನಾಂಕ **11.02.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾಸಾ-1,2 ರವರ ಪರಿಚಯ ಇಲ್ಲ. ಸಾಕ್ಷಿ ತನ್ನ ಸಹಿಯನ್ನು ಪಂಚನಾಮೆಯಲ್ಲಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-1 ಎಂದು ಈಗಾಗಲೇ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದ ವಿಷಯ ಗೊತ್ತಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ. ಅದೇ ಕಾಲಕ್ಕೆ ಶೋಧನಾ ಸಮುಚ್ಚಿತ ವರದಿಗೆ ಚಾಸಾ-1 ರವರು ಸಹಿ ಪಡೆದಿದ್ದರು. ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಮುದ್ದೆಮಾಲಿನ ಮೇಲೆ ಅಂಟಿಸಿದ ಚೀಟಿಯನ್ನು ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿರುವುದಿಲ್ಲ.

(ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

: ಪಾಟೀ ಸವಾಲು : ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕ: 10.04.2024 ರಂದು ಚಾಸಾ-1 ರವರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿಟಗಿನಕೊಪ್ಪ ಗ್ರಾಮದಲ್ಲಿರುವ ಆರೋಪಿಯ ಮನೆಯ ಮೇಲೆ ದಾಳಿ ಮಾಡಿ ಸೋಪಾ ಸೆಟ್ ಕೆಳಗಡೆ ಇದ್ದ ಹಳದಿ ಬಣ್ಣದ ಗೊಬ್ಬರಚೀಲದಲ್ಲಿ ಇಟ್ಟಿದ್ದ 90 ಎಂ ಎಲ್ ನ 120 ಓರಿಜಿನಲ್ ಚಾಯ್ಸ ವಿಸ್ಕಿಯ ಪೌಚುಗಳನ್ನು ಜಪ್ತಿಪಡಿಸಿಕೊಂಡು ಪಂಚನಾಮೆಯನ್ನು ರಾತ್ರಿ 8.30 ರಿಂದ

9.30 ಗಂಟೆಯವರೆಗೆ ಮಾಡಿ ರಾಸಾಯನಿಕ ಪರೀಕ್ಷೆಗೆ ಅಂತಾ ಮಾದರಿ ಪೌಚುಗಳನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ನಿಪಿ-1 ರ ಕಾಲಕ್ಕೆ ಹಾಜರಿದ್ದು ವಿಷಯ ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರ ವಿಷಯ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ನ್ನು ಆರೋಪಿ ಕಡೆಯಿಂದ ವಶಪಡಿಸಿಕೊಂಡು ತಂದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಯು ವಕೀಲರಿಂದಃ

(ಆರೋಪಿ ಪರ ವಕೀಲರು ಈ ಸಾಕ್ಷಿಧಾರರ ಪಾಟೀ ಸವಾಲು ಏನೂ ಇಲ್ಲ ಅಂತಾ ನಿವೇದಿಸಿಕೊಂಡಿರುತ್ತಾರೆ )

: ಮರುವಿಚಾರಣೆ : ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್